ಪ್ರಬಂಧ

ಗೊತ್ತಿಲ್ಲ. ಬಡಿಸಿದವನಿಗೆ ಇವನ ಕಟ್ಟಿಕೊಂಡು ಆಗಬೇಕಾದ್ದೇನಿಲ್ಲ. ತಿಂದರೂ ಆಯಿತು, ಬಿಟ್ಟರೂ ಆಯಿತು ಯಾವ ವ್ಯತ್ಯಾಸವೂ ಆಗುವುದಿಲ್ಲ. ಅವನ ಹಣ ಅವನಿಗೆ ಸಂದಾಯವಾಗುತ್ತದೆ ಅಷ್ಟು ಸಾಕು.

ಮೊನ್ನಿನ ಗೃಹಪ್ರವೇಶವೊಂದರಲ್ಲಿ ಮೋಜಿನ ಸಂಗತಿಯಿತ್ತು. ಮನೆಯ ಮುಂದಿನ ಪೆಂಡಾಲಿನಲ್ಲಿಯೇ ಡೈನಿಂಗ್ ಟೇಬಲುಗಳನ್ನು ಹಾಕಿ ಊಟ ಬಡಿಸುತ್ತಿದ್ದರು. ನೆಲ ಮಟ್ಟಸವಾಗಿರದ ಕಾರಣ ತಟ್ಟೆಯೊಳಗಿನ ಸಾರು ಅನ್ನದಲ್ಲಿ ನಿಲ್ಲದೆ ತಗ್ಗಿದ್ದ ಕಡೆಗೆ ಹರಿಯುತ್ತಿತ್ತು. ಎಲ್ಲಿ ತಟ್ಟೆಯಿಂದ ಹೊರಬಂದು ಪ್ಯಾಂಟು ನೆನೆಯುವುದೋ ಎಂದು ಭೀತರಾಗಿ ಸಾರನ್ನು ತಟ್ಟೆಯಲ್ಲೇ ಉಳಿಸಿಕೊಳ್ಳಲು ಎಲ್ಲರೂ ಹರಸಾಹಸ ಪಡುತ್ತಿದ್ದರು. ತಟ್ಟೆಯೊಳಗಿನ ಅನ್ನದಲ್ಲೇ ಅಣೆಕಟ್ಟು ಕಟ್ಟಿ ಕೊನೆಗೂ ಸಾರು ಹರಿಯದಂತೆ ತಡೆಯುವಲ್ಲಿ ಸಫಲರಾದದ್ದು ಯಾವ ಕಾಮಗಾರಿಗೂ ಕಡಿಮೆ ಇರಲಿಲ್ಲ.

ಇಕ್ಕಟ್ಟಿನ ಪ್ರಸಂಗ ಏನಪ್ಪಾ ಅಂದರೆ ಶಿಸ್ತಾಗಿ ಎಲೆ ಹಾಕಿಕೊಂಡು ನೀರು ಚಿಮುಕಿಸಿ ಇನ್ನೇನು 'ಬ್ಯಾಟಿಂಗು' ಶುರು ಮಾಡೋಣ ಅನ್ನೋಷ್ಟರಲ್ಲಿ ಅದೆಲ್ಲಿರುತ್ತಾರೋ...? ಇದನ್ನೇ ಕಾಯುತ್ತಿದ್ದರೇನೋ ಎಂಬಂತೆ ಥಟ್ಟನೆ ವೀಡಿಯೊಗ್ರಾಫರುಗಳು ಪ್ರತ್ಯಕ್ಷವಾಗಿಬಿಡುತ್ತಾರೆ. ಇಷ್ಟು ಹೊತ್ತು ವೇದಿಕೆ ಮುಂದೆ ಕ್ಯಾಮೆರಾಗಳನ್ನು ಹಿಡಿದುಕೊಂಡು ತಮ್ಮ ಪಾಡಿಗೆ ತಾವಿದ್ದವರು ಈ ಟೈಮಿಗೇ ನುಗ್ಗಬೇಕಿತ್ತಾ ಅಂದುಕೊಳ್ಳೋದರೊಳಗೆ ಮುಖಕ್ಕೆ ಫ್ಲಾಷ್‌ಲೈಟು ಬಿದ್ದು ಚಿತ್ರೀಕರಣ ಆರಂಭ! ಆಡುವಂತಿಲ್ಲ, ಅನುಭವಿಸುವಂತಿಲ್ಲ. ಕಿತ್ತು ಬರುವ ಸೆಕೆ, ಹುಬ್ಬಿನಿಂದ ತೊಟ್ಟಿಕ್ಕುವ ಬೆವರು... ಎಲ್ಲವೂ ನಮ್ಮ ತುತ್ತು ಕಿತ್ತುಕೊಳ್ಳಲೆಂದೇ ಸೃಷ್ಟಿಯಾದ ಮಸಲತ್ತುಗಳೋ? ಎಂಬ ಅನುಮಾನ ಹುಟ್ಟಿಸುತ್ತವೆ. ಛತ್ರದೊಳಗಿನ



ಆ ಬೃಹತ್ತು ಎಲ್‌ಇಡಿ ಪರದೆಯಲ್ಲಿ ನಾವು ಉಣ್ಣುತ್ತಿರುವುದನ್ನು ಎಲ್ಲರೂ ಕುಳಿತು ನೋಡುತ್ತಿದ್ದಾರೆ ಎಂಬ ಅನಿಸಿಕೆ ಬಂದ ತಕ್ಷಣ ಊಟ ಗಂಟಲಲ್ಲಿ ಸಿಕ್ಕಿಕೊಂಡಂತಾಗುತ್ತದೆ.

ನಮ್ಮ ಬೆಂದಕಾಳೂರಿನ ಸಮಾರಂಭಗಳನ್ನಂತೂ ಕೇಳುವುದೇ ಬೇಡ. ಎಷ್ಟೇ ಬೇಗ ಹೊರಟರೂ ಟ್ರಾಫಿಕ್ಕಿನಲ್ಲಿ ಇರುಕಿಕೊಂಡು ರಣಸಾಹಸ ಮಾಡಿ ತಲುಪುವಷ್ಟರಲ್ಲಿ ಸಾಕುಬೇಕಾಗಿರುತ್ತದೆ. ತರಾತುರಿಯಿಂದ ವೇದಿಕೆ ಮೇಲೆ ಮುಖ ತೋರಿಸಿ ಡೈನಿಂಗ್ ಹಾಲಿಗೆ ಧಾವಿಸುವಷ್ಟರಲ್ಲಿ ಏನಿದೆ? ಖಾಲಿ ಹಂಡೆ, ದಬರಿಗಳು ನಿಮ್ಮನ್ನು ಬರ ಮಾಡಿಕೊಳ್ಳುತ್ತವೆ. ಐಟಮ್ಮುಗಳೆಲ್ಲ ಮುಗಿದು ಬರೀ ಒಂದಷ್ಟು ಅನ್ನ, ಸಾಂಬಾರು, ಮೊಸರು ಮಿಕ್ಕಿರುತ್ತದೆ. ಈ ಸಂಪತ್ತಿಗೆ ಇಷ್ಟು ದೂರ ದೌಡಾಯಿಸಿ ಬರಬೇಕಿತ್ತಾ? ಅನ್ನಿಸಿ ನಮ್ಮ ಮೇಲೆಯೇ ಕೋಪ ಉಕ್ಕಿಬರುತ್ತದೆ.

ಇಂತಹ ಅನುಭವಗಳಿಂದ ಈಗ ಸಾಕಷ್ಟು ಮಾಗಿದ್ದೇನೆ. ಆಹ್ವಾನ ಬಂದ ಕಡೆಗೆಲ್ಲ ಹಿಂದು ಮುಂದು ನೋಡದೇ ನುಗ್ಗುವುದನ್ನು ಕಡಿಮೆ ಮಾಡಿದ್ದೇನೆ. ವಯಸ್ಸಾದಂತೆ ಬಾಯಿ ಚಪಲವೂ ಕಡಿಮೆಯಾಗಿದೆ. ತೀರಾ ಬೇಕಾದವರು ಕರೆದಾಗ ಮಾತ್ರವೇ ಒತ್ತಾಯಕ್ಕೆ ಮಣಿದು ಹೋಗುತ್ತೇನೆ. ಅತಿಯಾದ ನಿರೀಕ್ಷೆಗಳಿರದ ಕಾರಣ ನಿರಾಸೆಯೂ ಆಗುವುದಿಲ್ಲ. ●

